ರಾಜ್ಯದ ಗೋಬರ್ ಗ್ಯಾಸ್ ಸೂಪರ್‌ವೈಸರುಗಳ ಬಗ್ಗೆ

೨೨೫ ಶ್ರೀ ವಿ. ಮುನಿಯಪ್ಪ (ಸಿಡ್ಲಘಟ್ಟ).—ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಕರ್ನಾಟಕ ರಾಜ್ಯಾದ್ಯಂತ ಗೋಬರ್ ಅನಿಲ ಮೇಲ್ವಿಚಾರಕರ ಸಂಖ್ಯೆ ಎಷ್ಟು ? ಸದರಿ ನೌಕರರಿಗೆ ಖಾಯಂಗೊಳಿಸುವ ಬಗ್ಗೆ ಸರ್ಕಾರದ ನಿಲುವೇನು ?

(ಆ) ಸದರಿ ನೌಕರರಿಗೆ ಕನಿಷ್ಟ ವೇತನವನ್ನು ನೀಡುತ್ತಿದ್ದು ಯಾವುದೇ ಕಾರ್ಯವಿಲ್ಲದೆ ಸುಮಾರು ೬ ವರ್ಷಗಳಿಂದ ದುಡಿಯುತ್ತಿರುವುದು ಸರ್ಕಾರದವರ ಗಮನದಲ್ಲಿದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಮತ್ತು ಅಭಿವೃದ್ಧಿ ಪಂಚಾಯಿತಿ ರಾಜ್ಯ ಮಂತ್ರಿಗಳು).—

(ಅ) ಸದ್ಯಕ್ಕೆ ರಾಜ್ಯದಲ್ಲಿ ೧೨೩ ಜನ ಗೋಬರ್‌ಗ್ಯಾಸ್ ಸೂಪರ್‌ವೈಸರ್‌ಗಳು ಕೆಲಸ ಮಾಡುತ್ತಿದ್ದಾರೆ. ಸರ್ಕಾರಕ್ಕೆ ಅವರ ಕುಂದು ಕೊರತೆಗಳ ಬಗೆಗೆ ಸಹಾನುಭೂತಿ ಇದೆ. ಅವರ ಸೇವೆಯನ್ನು ನಿಯಮಿತಗೊಳಿಸುವ ಬೇಡಿಕೆಯನ್ನು ನಿಯಮಗಳ ಚೌಕಟ್ಟಿನಲ್ಲಿಯೇ ಪರಿಶೀಲಿಸಬೇಕಾಗುವುದು.

(ಆ) ಹೌದು.

ಶ್ರೀ ವಿ. ಮುನಿಯಪ್ಪ.— ಈ ಮೊದಲು ಡೆವಲಪ್‌ಮೆಂಟ್ ಆಫೀಸರ್‌ಗಳೆಂದು, ಆರ್ಗನೈಜರ್ಸ್ ಎಂದು, ಟೆಕ್ನೀಷಿಯನ್ಸ್ ಎಂದು ಮತ್ತು ಸೂಪರ್‌ವೈಜರ್ಸ್ ಎಂದು ಅಭಿವೃದ್ಧಿ ಕಾರ್ಯಗಳನ್ನು ನೋಡಿಕೊಳ್ಳಲು ನೇಮಕ ಮಾಡಿಕೊಳ್ಳಲಾಗಿತ್ತು. ನಂತರ ಈ ಸೂಪರ್ ವೈಜರ್ಸ್ ಬಿಟ್ಟು ಬೇರೆಯವರನ್ನೆಲ್ಲಾ ಕೆಲಸದಲ್ಲಿ ಖಾಯಂಗೊಳಿಸಲಾಯಿತು. ಆದರೆ ಇವರುಗಳನ್ನು ಆದೇರೀತಿಯಲ್ಲಿ ಮುಂದುವರೆಸಿರುವುದಲ್ಲದೆ ಇವರುಗಳನ್ನು ೩-೪ ತರಹ ಕೆಲಸಗಳನ್ನು ಮಾಡಿಸಿಕೊಳ್ಳಲಾಗುತ್ತಿದೆ. ಇವರುಗಳು ಆರ್ಟಿಜಾನ್ಸ್ ಸೊಸೈಟಿಗಳ ಎಕ್ಸ್-ಆಫಿಷಿಯೋ ಸೆಕ್ರೆಟರಿ ಆಗಿ ಕೂಡ ಕೆಲಸ ಮಾಡಬೇಕಾಗಿದೆ. ಈ ಕಾರಣದಿಂದ ಇವರುಗಳನ್ನೂ ಸಹ ಏತಕ್ಕೆ ಖಾಯಂ ಮಾಡಬಾರದು?

ಶ್ರೀ ಅಬ್ದುಲ್‌ನಜೀರ್ ಸಾಬ್.— ಇವರುಗಳು ಕಳೆದ ೬ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇವರುಗಳನ್ನು ಮೊದಲು ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯವರು ನೇಮಕ ಮಾಡಿಕೊಂಡು ಒಟ್ಟು ೩೫೦ ರೂಪಾಯಿಗಳ ಸಂಬಳ ಕೊಡುತ್ತಿದ್ದರು. ಯಾವುದೇ ನೇಮಕಾತಿ ನಿಯಮಗಳನ್ನು ಅನುಸರಿಸದೆ ಇವರನ್ನು ನೇಮಕ ಮಾಡಿಕೊಂಡಿದ್ದರು. ತಾ॥ ೧-೮-೧೯೮೨ರಲ್ಲಿ ಇದರ ಸೇವೆಯನ್ನು ನಮ್ಮ ಇಲಾಖೆಗೆ ಒಪ್ಪಿಸಿದ ಮೇಲೆ ನಾವು ಇವರ ಒಟ್ಟು ಸಂಬಳವನ್ನು ೩೫೦ ರೂಪಾಯಿಗಳಿಂದ ೪೦೦ ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. ಇವರುಗಳು ೩೦ ಗೋಬರ್-ಗ್ಯಾಸ್ ಯಂತ್ರಗಳನ್ನು ಸೂಪರ್‌ವೈಜ್ ಮಾಡಬೇಕಾಗಿರುವುದರಿಂದ ೫೦ ರೂಪಾಯಿಗಳ ಸಂಬಳ ಜಾಸ್ತಿ ಮಾಡಿದ್ದೇವೆ, ಇವರುಗಳ ಇಡೀ ಸಮಸ್ಯೆಯನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಿದ್ದೇವೆ. ಇವರನ್ನು ಕೆಲಸದಲ್ಲಿ ಖಾಯಂಗೊಳಿಸಬೇಕಾದರೆ ಅದಕ್ಕೆ ಸೂಕ್ತ ನಿಯಮಗಳನ್ನು ಮಾಡಬೇಕಾಗುತ್ತದೆ.

ಶ್ರೀ ವಿ. ಮುನಿಯಪ್ಪ.— ಇವರುಗಳನ್ನು ಇದೇ ಹುದ್ದೆಯಲ್ಲಿ ಖಾಯಂ ಮಾಡಲು ಇರುವಂತಹ ತೊಂದರೆಯಾದರೂ ಏನು?

ಶ್ರೀ ಅಬ್ದುಲ್‌ನಜೀರ್ ಸಾಬ್.— ಈ ಮೊದಲು ಇವರುಗಳನ್ನು ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯವರು ಯಾವ ರೀತಿ ನೇಮಕ ಮಾಡಿಕೊಂಡರೆಂಬುದು ನನಗೆ ಗೊತ್ತಿಲ್ಲ. ಅವರು ಇವರುಗಳನ್ನು ನಮ್ಮ ಇಲಾಖೆಗೆ ಕಳುಹಿಸಿದ ಮೇಲೆ ಈ ಒಂದು ಕೆಲಸವನ್ನು ಪಹಿಸಲಾಗಿದೆ, ೫೦ ರೂಪಾಯಿಗಳವರೆಗೆ ಸಂಬಳವನ್ನು ಜಾಸ್ತಿ ಮಾಡಲಾಗಿದೆ. ಇವರನ್ನು ಖಾಯಂಗೊಳಿಸಬೇಕಾದರೆ ಕಾನೂನಿನ ಚೌಕಟ್ಟಿನಲ್ಲಿಯೇ ವಿಚಾರ ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಸರ್ಕಾರ ಸಹಾನುಭೂತಿಯಿಂದ ಈ ವಿಚಾರವನ್ನು ಪರಿಶೀಲನೆ ಮಾಡುತ್ತಿದೆ.

ಒಬ್ಬ ಮಾನ್ಯ ಸದಸ್ಯರು. — ನಾನು ತಾಲ್ಲೂಕ್ ಬೋರ್ಡಿನ ಸದಸ್ಯನಾಗಿ ಹೇಳುವುದೇನೆಂದರೆ ಈ ಸೂಪರ್‌ವೈಸರ್‌ಗಳು ದಿನವೂ ನೂರರಿಂದ ೧೫೦ ಗೋಬರ್ ಅನಿಲ ಯಂತ್ರಗಳನ್ನು ಸೂಪರ್‌ವೈಜ್ ಮಾಡಬೇಕೆಂದು ಒಂದು ಟಾರ್ಗೆಟ್ ನಿಗದಿ ಮಾಡಿದ್ದಾರೆ. ಇದರಿಂದ ಇವರು ಸೈಕಲ್‌ಗಳ ಮೇಲೆ ಒಂದು

ಕಡೆಯಿಂದ ಮತ್ತೊಂದು ಕಡೆಗೆ ತಿರುಗಾಡಬೇಕಾಗಿದೆ. ಈಗ ತಾವು ಕೊಡುತ್ತಿರುವ ೩೦೦ ರೂಪಾಯಿ ಗಳ ಸಂಬಳ ಇವರ ಸೈಕಲ್ ಬಾಡಿಗೆಗೇ ಸಾಲುತ್ತಿಲ್ಲ. ಇದರ ಜೊತೆಗೆ ಆರ್ಟಿಜಾನ್ಸ್ ಸೊಸೈಟಿಗಳ ಎಕ್ಸ್-ಆಫಿಷಿಯೋ ಸೆಕ್ರೆಟರಿಗಳಾಗಿ ಕೂಡ ಇವರು ಕೆಲಸ ಮಾಡಬೇಕಾಗಿದೆ. ಆದ್ದರಿಂದ ಇವರ ಕೆಲಸ ವನ್ನು ಜಾಗ್ರತೆ ಖಾಯಂ ಮಾಡುವುದರ ಮೂಲಕ ಸಂಬಳ ಜಾಸ್ತಿ ಮಾಡುತ್ತಿರಾ?

ಶ್ರೀ ಅಬ್ದುಲ್ ನಜೀರ್ ಸಾಬ್.— ತಮ್ಮ ವಾದವನ್ನು ನಾನು ಒಪ್ಪಿದ್ದೇನೆ. ಆದಕ್ಕಾಗಿಯೇ ನಾನು ಮೊದಲೇ ಹೇಳಿದಂತೆ, ಇವರ ಸೇವೆಯನ್ನು ನಿಯಮಿತಗೊಳಿಸುವ ಬೇಡಿಕೆಯನ್ನು ಸರ್ಕಾರ ಕಾನೂನಿನ ಚೌಕಟ್ಟಿನಲ್ಲಿ ಸಹಾನುಭೂತಿಯಿಂದ ಮತ್ತು ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ. ಇವರ ವಿಚಾರದಲ್ಲಿ ಸರ್ಕಾರ ಒಂದು ನಿಲುವನ್ನು ಸಧ್ಯದಲ್ಲಿಯೇ ಕೈಕೊಳ್ಳುತ್ತದೆ.

ಶ್ರೀ ವಿ. ಮುನಿಯಪ್ಪ.— ಕಾನೂನಿನ ಚೌಕಟ್ಟಿನಲ್ಲಿ ಯೋಚನೆ ಮಾಡಬೇಕೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇವರ ಜೊತೆಗೆ ನೇಮಕ ಮಾಡಿಕೊಂಡಂತಹ ಬೇರೆ ಕೇಡರ್‌ನವರನ್ನು ಖಾಯಂ ಮಾಡಿದ ಮೇಲೆ ಇವರನ್ನೂ ಸಹ ಏತಕ್ಕೆ ಖಾಯಂ ಮಾಡಬಾರದು? ಸರ್ಕಾರದ ಒಂದು ಮನವಿಯ ಮೇರೆಗೆ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಿಂದ ಇವರನ್ನು ಕಳುಹಿಸಿಕೊಡ ಲಾಗಿದೆ. ಆದಕಾರಣ ಇವರ ಕಷ್ಟಸುಖ ನೋಡಿಕೊಳ್ಳಬೇಕಾದುದು ಸರ್ಕಾರದ ಜವಾಬ್ದಾರಿ ಅಲ್ಲವೇ?

ಉಪಾಧ್ಯಕ್ಷರು.— ತಾವು ಪ್ರಶ್ನೆ ಕೇಳಿ.

ಶ್ರೀ ವಿ. ಮುನಿಯಪ್ಪ.— ಈ ಒಂದು ಯೋಜನೆಯನ್ನು ಇನ್ನು ಮುಂದೆಯೂ ಸಹ ಮುಂದು ವರಿಸಿಕೊಂಡು ಹೋಗುವುದರಿಂದ ಇವರನ್ನು ಖಾಯಂ ಮಾಡಲು ಇರುವ ತೊಂದರೆಯಾದರೂ ಏನು? ಕಾನೂನು ರೀತ್ಯವಾಗಲೀ, ಧರ್ಮದ ದೃಷ್ಟಿಯಿಂದಲಾಗಲೀ ಇವರನ್ನು ಖಾಯಂ ಮಾಡಬೇಕಾಗಿದೆ ಈ ವಿಚಾರವನ್ನು ಸಹಾನುಭೂತಿಯಿಂದ ನೋಡಲಾಗುವುದೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ಇವರುಗಳು ಕಳೆದ ೬ ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದರೂ ಸಹ ಖಾಯಂ ಮಾಡದಿರಲು ಕಾರಣವೇನು? ಇವರನ್ನು ಯಾವಾಗ ಖಾಯಂ ಮಾಡುತ್ತೀರಾ ಎಂಬುದನ್ನು ತಾವು ತಿಳಿಸಬೇಕು?

ಶ್ರೀ ಅಬ್ದುಲ್ ನಜೀರ್ ಸಾಬ್.— ನಾನು ಮೊದಲೇ ಹೇಳಿದ್ದೇನೆ. ಇವರು ನೇಮಕಾತಿ ನಿಯಮಗಳಿಗೆ ಅನುಸಾರವಾಗಿ ನೇಮಕ ಆಗಿಲ್ಲ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯವರು ಯಾವ ನಿಯಮಗಳ ಪ್ರಕಾರ ಇವರನ್ನು ನೇಮಕ ಮಾಡಿದ್ದಾರೆಂಬುದನ್ನು ನೋಡಿ ಅತಿ ಶೀಘ್ರವಾಗಿ ಪರಿಶೀಲನೆ ಮಾಡುತ್ತೇವೆಂದು ಹೇಳಬಲ್ಲೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಮಾನ್ಯ ಮಂತ್ರಿಗಳು ಬಹಳ ತೀವ್ರಗತಿಯಿಂದ ಪರಿಶೀಲನೆ ಮಾಡಲಾಗುತ್ತದೆಂದು ಹೇಳಿದ್ದಾರೆ. ನಾಳೆ ಚುನಾವಣೆಗಳು ಬರುತ್ತಿವೆ. ನಾವು ಬರುತ್ತೇವೆಯೋ ಇಲ್ಲವೋ ಏನ್ನುವುದು ಅವರಿಗೆ ಗೊತ್ತಿಲ್ಲ. ಅಂದರೆ ಯಾವಾಗ ಮಾಡುತ್ತೀರಿ?

ಶ್ರೀ ಅಬ್ದುಲ್ ನಜೀರ್ ಸಾಬ್.— ಇಲ್ಲಿ ನಾನು ನಜೀರ್ ಉತ್ತರ ಕೊಡುತ್ತಿಲ್ಲ. ಸರ್ಕಾರದ ಉತ್ತರ ಕೊಡುತ್ತಿದ್ದೇನೆ. ನಾನು ಇಲ್ಲದಿದ್ದರೆ ನೀವು ಮಾಡಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.— ಮಾನ್ಯ ಖಾರ್ಗೆಯವರಿಗೆ ಆ ರೀತಿಯ ಅನುಮಾನ ಬೇಡ. ನಾವು ಚುನಾವಣೆಯಲ್ಲಿ ಗೆಲ್ಲುತ್ತೇವೆ.

ಒಬ್ಬ ಮಾನ್ಯ ಸದಸ್ಯರು.— ಗ್ರಾಮಾಂಣ ಪಟ್ಟಣದಲ್ಲಿ ರೈತರು ಸಾಲ ಮಾಡಿಕೊಂಡು ಸರ್ಕಾರಿ ಅಧಿಕಾರಿಗಳ ಆದೇಶದ ಮೇರೆಗೆ ಗೋಬರ್ ಅನಿಲ ಯಂತ್ರವನ್ನು ಪಡೆದುಕೊಂಡಿದ್ದಾರೆ.

ಉಪಾಧ್ಯಕ್ಷರು.— ಇಲ್ಲಿ ಪ್ರಶ್ನೆ ಇರುವುದು ಗೊಬ್ಬರ ಅನಿಲ ಯಂತ್ರ ಮೇಲ್ವಿಚಾರಕರ ಪುದ್ದಿ ಗಳನ್ನು ಖಾಯಂ ಮಾಡುವ ಪ್ರಶ್ನೆ: ತಾವು ಇಲ್ಲಿ ಕತೆ ಹೇಳಬೇಡಿ. ಏನು ಬೇಕೋ ಪ್ರಶ್ನೆ ಕೇಳಿ.

ಒಬ್ಬ ಮಾನ್ಯ ಸದಸ್ಯರು.— ಗೋಬರ್ ಗ್ಯಾಸ್ ಯಂತ್ರಕ್ಕೆ ಕೊಟ್ಟಿರುವ ಸಾಲಗಳನ್ನು ವಜಾ ಮಾಡುತ್ತೀರಾ?

ಶ್ರೀ ಅಬ್ದುಲ್ ನಜೀರ್‌ಸಾಬ್.— ಆ ಪ್ರಶ್ನೆ ಉದ್ಭವಿಸುವುದಿಲ್ಲ. ಮಾನ್ಯ ಸದಸ್ಯರ ಕ್ಷೇತ್ರ ದಲ್ಲಿ ಏನಾದರೂ ತೊಂದರೆ ಇದ್ದರೆ ನನಗೆ ಪತ್ರ ಬರೆದರೆ ಅದನ್ನು ನೋಡುತ್ತೇನೆ.

ಶ್ರೀ ವಿ. ಮುನಿಯಪ್ಪ.— ೧೨೩ ಜನ ಗೋಬರ್ ಗ್ಯಾಸ್ ಯಂತ್ರಗಳ ಸೂಪರ್‌ವೈಸರ್‌ಗಳ ಹುದ್ದೆಯನ್ನು ಖಾಯಂ ಗೊಳಿಸುವ ಬಗ್ಗೆ ಸರ್ಕಾರದ ನಿಲುವು ಏನು?

ಶ್ರೀ ಅಬ್ದುಲ್ ನಜೀರ್‌ಸಾಬ್.— ಮಾನ್ಯ ಸದಸ್ಯರ ತಲೆಯಲ್ಲಿ ಎರಡು ಸಮಸ್ಯೆಗಳಿವೆ. ಖಾದಿ ಮಂಡಳಿಗೂ ನನಗೂ ಯಾವುದೇ ರೀತಿಯ ಸಂಬಂಧವಿಲ್ಲ. ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ನಾನು ಉತ್ತರ ಹೇಳಬಲ್ಲೆ.

ಅರಸೀಕೆರೆ ಪಟ್ಟಣದಲ್ಲಿ ಹೆಣ್ಣುಮಕ್ಕಳ ಪ್ರೌಢ ಶಾಲಾ ಕಟ್ಟಡ ಕಟ್ಟಿಸುವ ಬಗ್ಗೆ

೨೨೬. ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).—ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಅರಸೀಕೆರೆ ಪಟ್ಟಣದಲ್ಲಿ ಸರ್ಕಾರಿ ಹೆಣ್ಣು ಮಕ್ಕಳ ಪ್ರೌಢಶಾಲೆ ಕಟ್ಟಡವನ್ನು ಪ್ರಾರಂಭಿಸುವುದಕ್ಕೆ ಜಮೀನು ಯಾವ ಇಲಾಖೆಯವರು ಕೊಟ್ಟಿರುತ್ತಾರೆ ;

(ಆ) ಹಾಗಿದ್ದಲ್ಲಿ ತ್ವರಿತವಾಗಿ ಕಟ್ಟಡ ಪ್ರಾರಂಭಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಯಾವ ಇಲಾಖೆಯವರು ಜಮೀನು ಕೊಟ್ಟಿರುವುದಿಲ್ಲ ಈಗಿನ ಶಿಥಿಲಗೊಂಡ ಪ್ರೌಢ ಶಾಲಾ ಕಟ್ಟಡವನ್ನು ಕೆಡವಿ ಅದೇ ಸ್ಥಳದಲ್ಲಿ ಕಟ್ಟಡ ನಿರ್ಮಿಸುವ ಪ್ರಸ್ತಾವನೆ ಇರುವುದರಿಂದ ಹೊಸ ನಿವೇಶನವನ್ನು ಇತರ ಇಲಾಖೆಯವರಿಂದ ಪಡೆಯುವ ಅಗತ್ಯವಿಲ್ಲ.

(ಆ) ಶಿಕ್ಷಣ ಇಲಾಖೆಗೆ ನೀಡುತ್ತಿರುವ ಹಣದಲ್ಲಿ ಈ ಸಧ್ಯಕ್ಕೆ ಸಾಧ್ಯವಾಗಲಾರದು.

ಶ್ರೀ ಜಿ ಎಸ್. ಬಸವರಾಜ್.—ಅರಸೀಕೆರೆಯಲ್ಲಿ ಪ್ರೌಢಶಾಲೆ ನಡೆಯತಕ್ಕದ್ದು ಶಿಥಿಲವಾದ ಕಟ್ಟಡದಲ್ಲಿ. ಸರ್ಕಾರದವರು ಕಟ್ಟಡ ಕಟ್ಟಲು ಹಣ ಇಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದ್ದಾರೆ. ಒಂದು ಸಾವಿರ ವಿದ್ಯಾರ್ಥಿಗಳು ಓದತಕ್ಕ ಕಟ್ಟಡ ಕುಸಿದು ಬಿದ್ದರೆ ಸರ್ಕಾರ ಏನು ಮಾಡುತ್ತದೆ ? ಅದನ್ನು ದಯಮಾಡಿ ತಿಳಿಸಬೇಕು

ಶ್ರೀ ಬಿ. ರಾಚಯ್ಯ.—ಹಿಂದೆ ತಾಲ್ಲೂಕು ಬೋರ್ಡ್‌ನವರು ಪ್ರೌಢಶಾಲೆಯನ್ನು ನಡೆಸುತ್ತಿದ್ದಂತಹ ಕಟ್ಟಡ ಅದು. ಹಿಂದೆ ಅದೇ ಕಟ್ಟಡದಲ್ಲಿ ಶಾಲೆಯನ್ನು ನಡೆಸಿಕೊಂಡು ಬಂದಿದ್ದಾರೆ. ಈಗ ಆ ಶಾಲೆ ಮತ್ತೆ ಕಟ್ಟಡವನ್ನು ಸರ್ಕಾರದ ವಶಕ್ಕೆ ಕೊಟ್ಟಿದ್ದಾರೆ. ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡ ತಕ್ಷಣ ಏನು ಮಾಡುವುದಕ್ಕೆ ಆಗುತ್ತದೆ. ಅರಸೀಕೆರೆಯಲ್ಲಿ ಶ್ರೀಮಂತರು ಜಾಸ್ತಿ ಇದ್ದಾರೆ. ಆದ್ದರಿಂದ ದಯಮಾಡಿ ಪಂಚಿಗೆ ಸಂಗ್ರಹಿಸಿದರೆ ಒಳ್ಳೆಯದು. ತಾಲ್ಲೂಕು ಬೋರ್ಡ್‌ನವರು ೭.೫ ಲಕ್ಷ ರೂಪಾಯಿಯ ಕಟ್ಟಡದ ಅಂದಾಜನ್ನು ತಯಾರುಮಾಡಿ ಕಟ್ಟಡ ಕಟ್ಟಿಸತಕ್ಕ ಯೋಚನೆ ಮಾಡಿ, ನಂತರ ಅಕ್ಕಪಕ್ಕದ ಊರಿನವರಿಗೆ ಏನೋ ವ್ಯತ್ಯಾಸ ಬಂದು ಕಟ್ಟಡ ಕಟ್ಟಿಸದೇ ಸರ್ಕಾರದ ವಶಕ್ಕೆ ಶಾಲೆಯನ್ನು ವಹಿಸಿಕೊಟ್ಟಿದ್ದಾರೆ, ಆದ್ದರಿಂದ ದಾನಿಗಳಿಂದ ಪಂಚಿಗೆ ರೂಪದಲ್ಲಿ ಹಣವನ್ನು ಸಂಗ್ರಹಿಸಿ, ಸರ್ಕಾರ ಕೂಡ ವಂತಿಗೆ ಕೊಟ್ಟು ಬೇಗ ಕೆಲಸ ಶುರುಮಾಡುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಜಿ. ಎಸ್. ಬಸವರಾಜ್.—ಮಾನ್ಯ ಮಂತ್ರಿಗಳು ಕಟ್ಟಡ ಶಿಥಿಲವಾಗಿರುವುದರ ಬಗ್ಗೆ ಹೇಳಬೇಕು.

ಉಪಾಧ್ಯಕ್ಷರು.—ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ; ಎಷ್ಟು ದಿವಸಗಳಲ್ಲಿ ಕಟ್ಟಡ ಕಟ್ಟುತ್ತೀರಿ ಎಂದು ಪ್ರಶ್ನೆ ಕೇಳಿ.